ದಿನಾಂಕ: 06-12-2023 ರಂದು ಸಾಕ್ಷಿದಾರರನ್ನು ಕರೆಯಿಸಿ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀಸವಾಲು: ಶ್ರೀ ಕೆ ವಾಯ್ ಎಸ್ ವಕೀಲರಿಂದ:**

3. ನನ್ನ ತಂದೆಯ ಹೆಸರು ರುದ್ರಯ್ಯ ಸ್ವಾಮಿ ಸರಗಣಾಚಾರಿ. ನನ್ನ ಅಣ್ಣನ ಹೆಸರು ಮುಪ್ಪನಯ್ಯ ಅವರ ಅಡ್ಡ ಹೆಸರು ಸಹ ಸರಗಣಾಚಾರಿ. ದಾವಾದ ಆಸ್ತಿ ನನ್ನ ತಂದೆಯ ತಂದೆ ಸಂಪಾದನೆ ಮಾಡಿದ್ದಾರೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ಹೆಸರಿಗೆ ಆಸ್ತಿಗಳನ್ನು ಮುಟೇಶನ್ ಮಾಡಿಕೊಂಡಿದ್ದೇನೆ. ನನ್ನ ತಂದೆ ರುದ್ರಯ್ಯ 1970-71 ನೇ ಇಸ್ವಿಯಲ್ಲಿ ತೀರಿಕೊಂಡಿದ್ದಾರೆ. 2003-04 ರಲ್ಲಿ ನನ್ನ ಹೆಸರಿಗೆ ಮುಟೇಶನ್ ಮಾಡಿಕೊಂಡಿದ್ದೇನೆ. 2003-04 ರಲ್ಲಿ ನನ್ನ ಅಣ್ಣನಾದ ಮುಪ್ಪನಯ್ಯ ಇರಲಿಲ್ಲ. ವಾದಿ ಮುಪ್ಪನಯ್ಯನವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಮುದಗಲ್‌ನ ಮುನ್ಸಿಪಾಲ್ಟಿಯಲ್ಲಿ ನಾವು ನಮ್ಮ ಅಣ್ಣನ ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇವೆ. ಮುಪ್ಪನಯ್ಯನವರ ಮರಣ ದಿನಾಂಕ: 08-03-2003 ಅಂತಾ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದಂತಹ ಮುಪ್ಪನಯ್ಯನವರ ಮರಣ ಪ್ರಮಾಣ ಪತ್ರ ಖೊಟ್ಟಿ ದಾಖಲಾತಿ ಎಂದರೆ ಸರಿಯಲ್ಲ. ನಾವು ಸದರಿ ದಾಖಲಾತಿಯನ್ನು ಈ ದಾವೆ ಹಾಕುವ ಸಲುವಾಗಿ ಸೃಷ್ಟಿಸಿದ್ದೇವೆಂದರೆ ಸರಿಯಲ್ಲ.

4. ಮುಪ್ಪನಯ್ಯನವರು ಹುಬ್ಬಳ್ಳಿಯಲ್ಲಿ ತೀರಿಕೊಂಡಿದ್ದಾರೆ. ಮುಪ್ಪನಯ್ಯನವರು ಹುಬ್ಬಳ್ಳಿಯಲ್ಲಿ ತೀರಿಕೊಂಡಿಲ್ಲ ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದಾರೆಂದರೆ ಸರಿಯಲ್ಲ. ನನ್ನ ಅಣ್ಣ ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿ ಇದ್ದರು ಎಂಬ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನನ್ನ ಅಣ್ಣ ಬಳ್ಳಾರಿಯ ವಿಮ್ಸ್ ಆಸ್ಪತ್ರೆಯ ಮುಂಬಾಗ ಹೋಟೆಲ್ ಇಟ್ಟುಕೊಂಡು ಜೀವನ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ವೀಮ್ಸ್ ಆಸ್ಪತ್ರೆಯಲ್ಲಿ ಕೆಲಸ ಮಾಡುವ ದುರಗಮ್ಮ ನನ್ನ ಅಣ್ಣನ ಹೋಟೆಲ್‌ಗೆ ಬಂದು ಹೋಗಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದುರಗಮ್ಮ ಮತ್ತು

ಮುಪ್ಪನಯ್ಯನವರಿಗೆ ಪ್ರೀತಿ ಬೆಳೆಯಿತು ನಮಗೂ ಕೂಡಾ ಗೊತ್ತಾಯಿತು ಎಂದರೆ ಸರಿಯಲ್ಲ.

5. ನಾವು ಜಾತಿಯಿಂದ ಜಂಗಮ ಜಾತಿಯವರು ಎಂದರೆ ಸರಿ. ದುರಗಮ್ಮ ಎಸ್ ಸಿ ಜಾತಿಯವರು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣ ಮದುವೆ ಕರೆದರು ಎಂದರೆ ಸರಿಯಲ್ಲ. ನಾವು ದುರಗಮ್ಮ ಪರಿಶಿಷ್ಟ ಜಾತಿಗೆ ಸೇರಿದವರು ಎಂದು ಬರಲಾಗುವುದಿಲ್ಲ ಎಂದು ಹೇಳಿದವು ಎಂದರೆ ಸರಿಯಲ್ಲ. ನನ್ನ ಅಣ್ಣನ ಮಗನ ಹೆಸರು ರುದ್ರೇಶ ಎಂದರೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ರುದ್ರಯ್ಯ ಎಂದರೆ ಸರಿ. ಆ ಕಾರಣಕ್ಕಾಗಿ ಮುಪ್ಪನಯ್ಯ ತನ್ನ ಮಗನಿಗೆ ರುದ್ರೇಶ ಅಂತಾ ಹೆಸರು ಇಟ್ಟರು ಎಂಸದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣನ ಮಗ ಮದುವೆ ಕಾಲಕ್ಕೆ ನನಗೆ ಕರೆಯಲು ಬಂದರು ಎಂದರೆ ಸರಿಯಲ್ಲ. ನನಗೆ ಲಗ್ನಪತ್ರವನ್ನು ಕೂಡಾ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾವು ಲಗ್ನಕ್ಕೆ ಹೋಗಲಿಲ್ಲ ಎಂದರೆ ಅವರು ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

6. ನಾವು 13 ದಾಖಲಾತಿಗಳನ್ನು ಹಾಜರುಪಡಿಸಿದ್ದೇವೆಂದರೆ ಸರಿ. ಸಾಕ್ಷಿಗೆ ನಿ ಡಿ 1 ಮತ್ತು 2 ತೋರಿಸಲಾಗಿ ಅದರಲ್ಲಿರುವ ಅಕ್ಷರಗಳನ್ನು ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ಬಹಳ ದಿನಗಳು ಆಗಿದ್ದರಿಂದ ಯಾವ ಯಾವ ದಾಖಲಾತಿಗಲು ಹಾಕಿದ್ದೇವೆಂದು ನೆನಪಿಲ್ಲ. ದಾವಾದ ಆಸ್ತಿಯನ್ನು ಬಿಟ್ಟರೆ ನಮಗೆ ಬೇರೆ ಯಾವುದೇ ಆಸ್ತಿಗಳು ಇಲ್ಲ. ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ಅದರಲ್ಲಿರುವ ವ್ಯಕ್ತಿಗಳನ್ನು ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ದುರಗಮ್ಮ ಜಾತಿಯಿಂದ ಎಸ್ ಸಿ ಜಾತಿಗೆ ಸೇರಿದವರಾಗಿದ್ದರಿಂದ ಆ ಭಾವನೆ ಇಟ್ಟುಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ. ಮುಪ್ಪನಯ್ಯನವರಿಗೆ ಬರತಕ್ಕಂತಹ ಆಸ್ತಿಯನ್ನು ಹೊಡೆಯಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರು ಭಾಗ ಕೇಳುವ ಮೊದಲು ವಾದಿಯರು ಮತ್ತು ನಾವು ಚೆನ್ನಾಗಿದ್ದೇವೆಂದರೆ ಸರಿಯಲ್ಲ. ವಾದಿಯರು ಆಸ್ತಿಯಲ್ಲಿ ಭಾಗ ಕೇಳಿದ್ದರಿಂದ ನಮಗೂ ಮತ್ತು ವಾದಿಯರಿಗೆ ಜಗಳ ಆಯಿತು ಎಂದರೆ ಸರಿಯಲ್ಲ.

ವಾದಿಯರು ದಾಖಲಾತಿ ಪಡೆಯಲು ತಹಶೀಲ್ದಾರ ಬಳಿ ಅರ್ಜಿ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನಾವು ರಾಜಕೀಯ ಬಲವನ್ನು ಬಳಸಿ ಮತ್ತು ಹಣವನ್ನು ಬಳಸಿ ವಾದಿಯರಿಗೆ ದಾಖಲಾತಿ ಸಿಗದೆ ಹಾಗೆ ಮಾಡಿದ್ದೇವೆಂದರೆ ಸರಿಯಲ್ಲ. ಆ ಕಾರಣದಿಂದ ವಾದಿಯರು ಮಾಹಿತಿ ಹಕ್ಕು ಅಡಿಯಲ್ಲಿ ದಾಖಲಾತಿಗಳನ್ನು ಪಡೆದುಕೊಂಡರು ಎಂದರೆ ನನಗೆ ಮಾಹಿತಿ ಇಲ್ಲ.

7. ದುರಗಮ್ಮನವರು ಮುಪ್ಪನಯ್ಯನವರ ಆಸ್ತಿಯಲ್ಲಿ ಭಾಗ ಕೊಡಬೇಕೆಂದು ಒತ್ತಾಯಿಸಿದರು ಎಂದರೆ ಸರಿಯಲ್ಲ. ವಾದಿಯರಿಗೆ ನಾವು ಇನ್ನೊಂದು ಸಲ ನೀವು ಬಂದರೆ ಜೀವಕ್ಕೆ ಕುತ್ತು ಇದೆ ಎಂದು ಹೇಳಿದೆವು ಎಂದರೆ ಸರಿಯಲ್ಲ. ದುರಗಮ್ಮ ಸಂಡೂರು ನ್ಯಾಯಾಲಯದಲ್ಲಿ ನನ್ನ ಮೇಲೆ ಖಾಸಗಿ ಫಿರ್ಯಾದಿ ಹಾಕಿದ್ದಾರೆ ಎಂದರೆ ಸರಿ. ನನ್ನ ಮೇಲೆ ಅಲ್ಲದೆ ನಮ್ಮ ಕುಟುಂಬದ 04 ಜನರ ಮೇಲೆ ಖಾಸಗಿ ಫಿರ್ಯಾದಿ ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ಖಾಸಗಿ ಫಿರ್ಯಾದಿ ಸಂಖ್ಯೆ 45/2021 ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ಅದು ಇನ್ನೂ ಇತ್ಯರ್ಥವಾಗದೆ ಬಾಕಿ ಉಳಿದಿದೆ ಎಂದರೆ ಗೊತ್ತಿಲ್ಲ. ಪೋಟೋದಲ್ಲಿರುವವರು ನನ್ನ ಅಣ್ಣ ಗೊತ್ತಿದ್ದರೂ ಕೂಡಾ ಅವರನ್ನು ಗುರುತಿಸಿಲ್ಲ ಎಂದರೆ ಸರಿಯಲ್ಲ. ಪೋಟೋದಲ್ಲಿ ಮುಪ್ಪನಯ್ಯನವರ ಪರಿವಾರದವರು ಎಲ್ಲರೂ ಇದ್ದಾರೆ ಗೊತ್ತಿದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸರಿ ಇದೆ.
ಸಹಿ/-
( ಚಂದ್ರಶೇಖರ ಪಿ. ದಿಡ್ಡಿ )

ಹಿರಿಯ ಸಿವಿಲ್ ನ್ಯಾಯಾಧೀಶರು,
ಲಿಂಗಸೂಗುರು.